ಉ) ಆ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ತುರ್ತಾಗಿ ಸರಕಾರ ಕೈಗೊಂಡಿರುವ ಕ್ರಮವೇನು?

ಊ) ಈ ಗ್ರಾಮಕ್ಕೆ ಕುಡಿಯುವ ನೀರಿನ ಶಾಶ್ವತ ವ್ಯವಸ್ಥೆ ಮಾಡುವುದು ಯಾವಾಗ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 1990-91ರ ಕ್ರಿಯಾ ಯೋಜನೆಯ ಭಾಗ-2 ರಲ್ಲಿ ಸೇರಿತ್ತು.

ಆ) ಸದರಿ ಯೋಜನೆಯನ್ನು ಭಾಗ - 2 ರಲ್ಲಿ ಅನುಮೋದಿಸಿದ್ದುದರಿಂದ ಮತ್ತು ಅನುದಾನ ಲಭ್ಯವಿಲ್ಲದ ಕಾರಣ ಯೋಜನೆಯನ್ನು ತೆಗೆದುಕೊಳ್ಳಲಾಗಲಿಲ್ಲ.

ಇ) ರೂ. 1.03 ಲಕ್ಷಗಳು.

ಈ) ಸದರಿ ಯೋಜನೆಯನ್ನು ಅನುದಾನ ಲಭ್ಯತೆ ಇಲ್ಲದ ಕಾರಣ 90-91ರಲ್ಲಿ ತೆಗೆದುಕೊಳ್ಳಲಾಗಲಿಲ್ಲ. 1990-91ರಲ್ಲಿ ಸದರಿ ಯೋಜನೆಗೆ ಬರ ಪರಿಹಾರ ಕಾರ್ಯಕ್ರಮದಡಿಯಲ್ಲಿ ಜಿಲ್ಲಾಧಿಕಾರಿ, ಗುಲ್ಬರ್ಗಾ ಇವರಿಂದ ಮಂಜೂರಾತಿ ದೊರೆಯಿತು. ಜಲ ಮೂಲ ಇತ್ಯರ್ಥ ಮಾಡುವುದು ವಿಳಂಬವಾಯಿತು.

ಉ) ಸದ್ಯದಲ್ಲಿ, ಈ ಗ್ರಾಮದಲ್ಲಿ 3 ಕೈಪಂಪು ಜೋಡಿತ ಕೊಳವೆ ಬಾವಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿವೆ. ಇದರ ಜೊತೆಗೆ ಒಂದು ಕಿರು ನೀರು ಸರಬರಾಜು ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಊ) ಏಪ್ರಿಲ್ 1993.

<u>ವಿಷಯ : ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ ಕೊಳವೆ ಬಾವಿ ಕೊರೆಯಲು ವ್ಯವಸ್ಥೆ.</u>

885

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ರಾಜೋಳ ಗ್ರಾಮ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮವೆಂದು ಪರಿಗಣಿಸಿ 4 ಕಿ. ಮೀ. ಅಂತರದ ರಾಮತೀರ್ಥದಿಂದ ಪಿ.ವಿ.ಸಿ. ಪೈಪುಗಳನ್ನು ಎಳೆದು ನೇರವಾಗಿ (ಡೈರೆಕ್ಟ್) ಪಂಪು ಮಾಡಿ ನೀರು ಒದಗಿಸಲಾಗಿದೆಯೆಂದು ಸದನದಲ್ಲಿ ದಿನಾಂಕ : 17-12-90ರಂದು ಉತ್ತರ ನೀಡಿದರೂ ಸಹ ನೀರು ಸರಬರಾಜು ಇಲ್ಲದೆ ನಾಗರೀಕರಿಗೆ ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಪ್ರಕಾರ ನೀರು ನೇರವಾಗಿ ಸರಬರಾಜು ಮಾಡಲಾಗಿದೆ ಎಂದು ಸತ್ಯಕ್ಕೆ ದೂರವಾಗಿ ಉತ್ತರ ನೀಡಿ ಸುಮಾರು 2 ವರ್ಷಗಳಿಂದ ಅಲ್ಲಿಯ ನಾಗರೀಕರಿಗೆ ಕುಡಿಯುವ ನೀರಿನ ಅನಾನುಕೂಲ ಮಾಡಿರುವುದು ಸರ್ಕಾರದ ಗಮನಕ್ಕೆ ತಿಳಿದಿದೆಯೆ?

ಇ) 4 ಕಿ.ಮೀ ಅಂತರದಿಂದ ಪಿ. ವಿ. ಸಿ. ಪೈಪುಗಳು ತಾಂತ್ರಿಕವಾಗಿ ಎಳೆಯದೇ ಹಾಗೂ ನೀರಿನ ಒತ್ತಡಕ್ಕೆ ಪೈಪುಗಳು ಒಡೆದು ಹೋಗಿ ನೀರಿನ ಸರಬರಾಜು ಇಲ್ಲದಂತೇ ಆಗಿಲ್ಲವೇ?

ಈ) ದಿನಾಂಕ: 22-1-91ರಂದು ಸದನದಲ್ಲಿ ನೀಡಿರುವ ಉತ್ತರದಲ್ಲಿ ಪಿ.ವಿ.ಸಿ. ಪೈಪುಗಳನ್ನು ಬದಲಾಯಿಸಿ ಜಿ.ಐ. ಪೈಪುಗಳನ್ನು ಎಳೆಯುವ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದ್ದು ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಶ್ರೀ ಎಂ. ವೈ. ಘೊರ್ಪಡೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಆಗಾಗ್ಗೆ ನೀರಿನ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ) ಏರು ಕೊಳವೆ ಮತ್ತು ವಿತರಣಾ ಪೈಪುಗಳಿಗೆ ಹಾನಿಯುಂಟಾದಾಗ ಆ ಗ್ರಾಮಕ್ಕೆ ಕುಡಿಯುವ ನೀರಿನ ತೊಂದರೆಯುಂಟಾಗುತ್ತದೆ.
ಇ) ಕೊಳವೆ ಪೈಪುಗಳು ಭೂಮಟ್ಟದ ಮೇಲೆ ಅಂದರೆ ಶಹಬಾದ್ ಕಲ್ಲು ಚಪ್ಪಡಿಗಳ ಮೇಲೆ 1 ಕಿ.ಮಿ. ದೂರ ಹಾದು ಹೋಗುವುದರಿಂದ ಪೈಪುಗಳು ಹಾನಿಗೊಳಗಾಗುವ ಸಂದರ್ಭವಿರುತ್ತವೆ.
ಈ) ಈ ಮೇಲ್ಕಟ್ಟದ ಒಂದು ಕಿ.ಮೀ ಉದ್ದದ ಪಿ.ವಿ.ಸಿ. ಕೊಳವೆಗಳ ಬದಲಾವಣೆಯ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ವಿಷಯಃ ಗುಲ್ಬರ್ಗಾ ಜಿಲ್ಲೆಯ ಸಹಕಾರ ಕೇಂದ್ರ ಬ್ಯಾಂಕಿನಿಂದ ರಸಗೊಬ್ಬರ ಖರೀದಿ.
887
ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಕೇಂದ್ರ ಸಹಕಾರ ಬ್ಯಾಂಕಿನಿಂದ ರಸಗೊಬ್ಬರ ಖರೀದಿ ಮಾಡಲು (ಬಿ) ಕಾಂಪೋನೆಂಟ್ ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ಮಂಜೂರಾಗಿ ಅದರ ಪ್ರಕಾರ ಸಹಕಾರ ಸಂಘಗಳವರು ರಸಗೊಬ್ಬರವನ್ನು ಖರೀದಿ ಮಾಡಿ ಸಾಲ ಮಂಜೂರಾಗಿರುವ ಸದಸ್ಯರುಗಳಿಗೆ ಹಂಚಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಆ) ಒಂದು ವೇಳೆ (ಬಿ) ಕಾಂಪೋನೆಂಟ್ ಸಾಲ ಮಂಜೂರಾಗಿರುವ ಸದಸ್ಯರಿಗೆ ರಸಗೊಬ್ಬರ ಮುಟ್ಟಿಸಿಲ್ಲವೆಂದರೆ ಇದು ದುರುಪಯೋಗವಾಗಿದ್ದು ನಿಜವಲ್ಲವೆ?
ಇ) ಈ ಪ್ರಕಾರ ಜೇವರ್ಗಿ ತಾಲ್ಲೂಕಿನ ನೆಲ್ಲೋಗಿ ಹಾಗೂ ಅಂಥೋಲ ಸೇವಾ ಸಹಕಾರ ಸಂಘದವರು (ಬಿ) ಕಾಂಪೋನೆಂಟ್‌ದಿಂದ ಗೊಬ್ಬರವನ್ನು ಪಡೆದು ಸಾಲ ಮಂಜೂರಾಗಿರುವ ಸದಸ್ಯರಿಗೆ ಮುಟ್ಟಿಸದಿದ್ದರೆ ಸಂಬಂಧಪಟ್ಟವರ ಮೇಲೆ ಸರ್ಕಾರವು ಕೈಗೊಂಡಿರುವ ಕ್ರಮವೇನು?
ಈ) ಒಂದು ವೇಳೆ ಈ ರಸಗೊಬ್ಬರ ದುರುಪಯೋಗವಾದ್ದು ನಿಜವಿದ್ದರೆ ರೈತರಿಗೆ ಮುಟ್ಟುವ ವ್ಯವಸ್ಥೆ ಮಾಡುವುದು ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಹೌದು ಬಂದಿವೆ.
ಆ) ಹೌದು.
ಇ) ನೆಲ್ಲೋಗಿ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ರೂ.1.00 ಲಕ್ಷ ಮೊತ್ತದ (ಬಿ) ಕಾಂಪೋನೆಂಟ್ ಸಾಲ ಮಂಜೂರಾಗಿದ್ದು ಈ ಪೈಕಿ ಸಂಘವು ರೂ.82,000 ಮೊತ್ತದ ಗೊಬ್ಬರವನ್ನು ರೈತ ಸದಸ್ಯರಿಗೆ ವಿತರಿಸಿ ಉಳಿದ ರೂ.18.000 ಬ್ಯಾಂಕಿಗೆ ಪಾವತಿ ಮಾಡಿದ್ದಾರೆ.
ಅದರಂತೆ ಅಂಥೋಲ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ರೂ.3.62 ಲಕ್ಷ (ಬಿ) ಕಾಂಪೋನೆಂಟ್ ಸಾಲ ಮಂಜೂರಾಗಿದ್ದು ಸಂಘದ ಕಾರ್ಯದರ್ಶಿಯ ಮಾರಾಟ